Doc-547
T-P-2

Reg No B G 155 18—9—72

In The State First Golden Jubilee Celebrated Paper 'Satyavadi' daily, Mysore 4

56th Year of Publication

★

News, Views, Dharmic Moral Ethical Matters

ರಾಷ್ಟ್ರದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಭಾರತೀಯ ಹೆಂಗಸರ ರವಾನೆ ಮುಂದುವರಿಕೆ

ಕನ್ಯೆಯರ ರವಾನೆ

ಮಧ್ಯಪ್ರಾಚ್ಯಕ್ಕೆ ಭಾರತೀಯ ಕನ್ಯೆಯರ ರವಾನೆ ಮುಂದುವರಿಯುತ್ತಿದೆ ಬೊಂಬಾಯಿನಲ್ಲಿ ನಡೆಸಿದ ತಪಿಖೆಯಲ್ಲಿ ಈ ತಿಂಗಳಲ್ಲಿ ಅನೇಕ ಮಹಿಳೆಯರು ಕುವೇಟ್ ಹಾಗೂ ಬಹರೇನ್‌ಗೆ ಹೋದದು ಗೊತ್ತಾಗಿದೆ ಭಾರತ ಹಾಗೂ ಎಣ್ಣೆ ಸಂಪತ್ತಿನ ಪರ್ಷಿಯ ಕೊಲ್ಲಿ ರಾಜ್ಯಗಳ ನಡುವೆ ಕನ್ಯೆಯರ ವ್ಯಾಪಾರ ಹೆಚ್ಚುತ್ತಿದೆ ಎಂದು ಬಿರೂಟಿನಿಂದ ವರದಿ ಬಂದಿದೆ. ಈ ತಿಂಗಳಲ್ಲಿ ದ್ವಾರಕಾ ಹಡಗಿನಲ್ಲಿ ಇನ್ನೂರು ಯುವತಿಯರು ಮತ್ತು ಮಧ್ಯ ವಯಸ್ಸಿನ ಮಹಿಳೆಯರು ಹೋದರೆಂದು ಗೊತ್ತಾಗಿದೆ.

★

ರಕ್ತ ದಾನಿಗಳಿಗೆ ಚಿನ್ನದ ಪದಕ

ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಕೊಡಲು ಬೇಕಾಗುವ ರಕ್ತದ ಬೇಡಿಕೆ ಹೆಚ್ಚುತ್ತಿರುವ ಕಾರಣ ಸ್ವಯಂ ಪ್ರೇರಣೆಯಿಂದ ರಕ್ತ ದಾನ ಮಾಡುವವರಿಗೆ ಮಾನ್ಯತೆ ಹಾಗೂ ಪ್ರೋತ್ಸಾಹ ನೀಡುವ ಯೋಜನೆಯೊಂದನ್ನು ರಾಜ್ಯ ಸರ್ಕಾರ ಆರಂಭಿಸಿದೆ 30 ಬಾರಿ ರಕ್ತದಾನ ಮಾಡಿದವರಿಗೆ ಚಿನ್ನದ ಲೇಪ ಮಾಡಿದ ಪದಕ ಕೊಡಲಾಗುವದು ಇಪ್ಪತ್ತು ಸಲ ರಕ್ತದಾನ ಮಾಡಿದವರಿಗೆ ಬೆಳ್ಳಿಯ ಹಾಗೂ ಹತ್ತು ಸಲ ದಾನ ಮಾಡಿದವರು ಕಂಚಿನ ಪದಕ ಪಡೆಯುವರು

★

ಕೇಂದ್ರದ ಸಹಾಯ

ಭಾರತ ಸರ್ಕಾರ ಮುಂಗಾರಿನಲ್ಲಿ ಹೆಚ್ಚಾಗಿ ವ್ಯವಸಾಯ ಮಾಡುವುವರ ಸಹಾಯಕ್ಕಾಗಿ ಕೇಂದ್ರವು ರಾಜ್ಯಕ್ಕೆ 2 ಕೋಟಿ ರೂ ಬೆಲೆಯ ಹೈ ಬ್ರಿಡ್ ಬೀಜಗಳನ್ನು ಕೊಡುವುದೆಂದು ರಾಜ್ಯದಸಹಾಯಕಮಂತ್ರಿ ಶ್ರೀ ದೇವೇಂದ್ರಪ್ಪ ಫಾಲಪ್ಪ ಗುಲ್ಬರ್ಗದಲ್ಲಿ ತಿಳಿಸಿದರು

ಶಿಖರದಲ್ಲಿ ಮದುವೆ

ನ್ಯೂಯಾರ್ಕಿನ ಸಾರನಾಕ್ ಸರೋವರದಿಂದ ಬಂದಿರುವ ವಾರ್ತೆ 25 ವರ್ಷ ವಯಸ್ಸಿನ ಡೆವಿಸ್ ಜಾರ್ಜ್ ಮತ್ತು 18 ವರ್ಷ ವಯಸ್ಸಿನ ಇರ್ಮೆ ಹಾಲೆಂಡ್ ನ್ಯೂಯಾರ್ಕ್ ರಾಜ್ಯದಲ್ಲಿ 1600 ಮೀಟರು ಗಳ ಅತಿ ಎತ್ತರದ ಶಿಖರವಾದ ಮೌಂಟ್ ಮಾಸಿ ಹತ್ತಿ ಅಲ್ಲಿ ಮದುವೆ ಆದರು ಇವರು ಪರ್ವತಾರೋಹಿಗಳ.

★

ಡಾ ॥ ಮೋದಿ

ನೇತ್ರದಾನಿ ಪದ್ಮಭೂಷಣ ಡಾ॥ ಎಂ.ಸಿ ಮೋದಿ (ಭಾರತಾಧ್ಯಕ್ಷರ ಗೌ ॥ ನೇತ್ರ ವೈದ್ಯರು) ತಾ ॥ 19 ರಂದು ತ್ರಿಚೂರಿನ (ಕೇರಳ) ಲ್ಲಿ ನೇತ್ರ ಚಿಕಿತ್ಸಾ ಶಿಬಿರವನ್ನು ನಡೆಸುವರು.

★

ಶ್ರೀ ಕೃಷ್ಣರಾಜೇಂದ್ರ ಕೊಆಪರೇಟಿವ್ ಸೊಸೈಟಿ

ಮೇಲ್ಕಂಡ ಸೊಸೈಟಿಯು 72–73 ನೇ ಸಾಲಿಗೆ ಡೈರೆಕ್ಟರರಾಗಿ ಚುನಾಯಿಸಲ್ಪಟ್ಟಿರುವವರು— ಸರ್ವಶ್ರೀ ಎಂ ಬಿ ಬಸವರಾಜ್, ಶ್ರೀಕಂಠಶರ್ಮ, ಎಂ ಎಲ್ ಪದ್ಮನಾಭ ಜೋಯಿಸ್, ಹೆಚ್ ಗಂಗಾಧರ್, ವೇದಾಂತ ಹೆಮ್ಮಿಗೆ, ಕೆ ಕರಿಯಣ್ಣ, ಬಿ ಸಿದ್ಧಲಿಂಗಯ್ಯ, ಮೇಜರ್ ಟಿ ಆರ್ ರಂಗನಾಥ ರಾವ್, ಕೆ ಜಿ ಶಂಕರನಾರಾಯಣ ಶಾಸ್ತ್ರಿ, ಕೆ ಆರ್ ವೀರಭದ್ರಪ್ಪ, ಡಿ ದೊಡ್ಡಯ್ಯ, ಎಂ ಅಲಪ್ಪ, ಎಂ ಎಸ್ ರಾವು ಲಿಂಗು, ಬಿ ಕೆ ಆತ್ಮಾರಾಂ, ಹೆಚ್ ಕೆ ಕೃಷ್ಣಮೂರ್ತಿ.

★

ಜಾಕ್‌ಪಾಟ್

ಮೈಸೂರು ಕುದುರೆ ಪಂದ್ಯ ನಿನ್ನೆ ಮುಗಿಯಿತು ತಲಾ ರೂ. 39200 ಎರಡು ಟಿಕೆಟ್‌ಗಳಿಗೆ ದೊರೆಯಿತು.

ಮಹಿಳಾ ಪೋಲೀಸ್

ಅಲಸ್ಪೈಯಿಂದ ಬಂದಿರುವ ವರದಿಯ ಪ್ರಕಾರ ದ್ವಿಪದವೀಧರಳಾದ ಕೊಂಕಣಿ ಭಾಷೆ ಆಡುವ ಗೌಡ ಸಾರಸ್ವತ ಮಹಿಳೆ 24 ವರ್ಷದ ಚಂದ್ರಮತಿ ಮಹಿಳಾ ಪೋಲೀಸು ಪ್ಯಾಥೆ ಆಗಿ ಆರಿಸಲ್ಪಟ್ಟ 6 ನುಂದಿಯಲ್ಲಿ ಒಬ್ಬಳಾಗಿರುವಳು 300 ಆರ್ಜಿಗಳಲ್ಲಿ ಇವಳದೂ ಒಂದಾಗಿತ್ತು.

★

ರೂ. 6 ಲಕ್ಷ ಬೆಲೆ ಪದಾರ್ಥ

ಮದ್ರಾಸು ಮೈಸೂರು ರಾಜ್ಯದ ಜೋಗಂಪಟ್ಟಿ ಮತ್ತು ಚಿಕ್ಕತಾಯ ಗಡಿಯಲ್ಲಿ ರೂ 6 ಲಕ್ಷ ಬೆಲೆಯ ಹೊಳೆಯುವ ಲೋಹದ ನೂಲು ಮತ್ತು ಬಟ್ಟೆಗಳನ್ನು ಮದರಾಸಿನ ಸಿ ಐ ಡಿ ಮತ್ತು ಬೆಂಗಳೂರಿನ ಆ ಬ್ಯಾರಿಯವರು ವಶಪಡಿಸಿಕೊಂಡು ನಾಲ್ವರನ್ನು ಬಂಧಿಸಿರುವರು.

●

ಭಾರಿ ಸಂಖ್ಯೆಯಲ್ಲಿ ಸಾವು

ಮನಿಲಾ— ಈಶಾನ್ಯದ ನಾಗಾ ಪಟ್ಟಣದಲ್ಲಿ ನಡೆದ ಧಾರ್ಮಿಕ ನೀರಿನ ಉತ್ಸವ ಕಾಲದಲ್ಲಿ ಒಂದು ಮರದ ಸೇತುವೆ ಕುಸಿದು 145 ಮಂದಿ ಸತ್ತರು.

★

ಹಣ ಮಂಜೂರು

ಬೆಂಗಳೂರು–ಬೆಳಗಾಂ ಜಿಲ್ಲೆಯ ಹರಿಶಿಷ್ಟ ಕೋಮು ಜನಾಂಗದ ಮಹಿಳೆಯರಿಗೆ ಉಚಿತವಾಗಿ 144 ಹೊಲಿಗೆ ಯಂತ್ರಗಳನ್ನು ಹಂಚಲು ರಾಜ್ಯದ ಸಮಾಜ ಕಲ್ಯಾಣ ಇಲಾಖೆ ರೂ. 44800 ಮಂಜೂರು ಮಾಡಿದೆ.

★

ಪವಿನುಡಿ

ಸಂಸ್ಥೆಗಳೂ, ಕಾನೂನುಗಳೂ ಎಲ್ಲರಿಗೂ ಸಮಾನತೆ, ಭದ್ರತೆ ಕೊಡುವಂತಿರಬೇಕು. — ಜೆರ್ಡ್ಯೂಯಿ

ಲೋಕೋ ನೌಕರರು

ಇನ್ನು ಹೆಚ್ಚು ಮಂದಿ ಲೋಕೊ ನೌಕರರು ಮದರಾಸಿನಲ್ಲಿ ಕೆಲಸಕ್ಕೆ ವಾಪಸಾಗ ಬೇಕಾಗಿದೆ ಮೈ ಸೂ ರು ವಿಭಾಗದಲ್ಲಿ ಮುಷ್ಕರಿಸಿರುವ ಯಾರೂ ಕೆಲಸಕ್ಕೆ ಹಿಂದಿರುಗಿಲ್ಲ.

★

ದಸರಾ ವಸ್ತು ಪ್ರದರ್ಶನ *

ಮೈಸೂರು— ದಸರಾ ಸಮಾರಂಭಗಳ ವ್ಯವಸ್ಥಾಪಕ ಸಮಿತಿ ನಿರ್ಧಾರದಂತೆ ದಸರಾ ವಸ್ತು ಪ್ರದರ್ಶನ ಮತ್ತು ಕೈಗಾರಿಕಾ ಸಂತೆಯು ಅಕ್ಟೋಬರು 2 ರಿಂದ ನವೆಂಬರ್ 20 ರವರೆಗಿನ ಬದಲು; ಅಕ್ಟೋಬರ್ 8 ರಿಂದ ನವೆಂಬರ್ 21 ರವರೆಗೆ 45 ದಿನಗಳು ನಡೆಯುವುದೆಂದು ಪ್ರಕಟವಾಗಿದೆ.

★

ಮಸ್ತಕಾಭಿಷೇಕ

ಹುಣಸೂರು ತಾಲ್ಲೂಕು ಬಿಳಿಕೆರೆ ಹತ್ತಿರ ಇರುವ ಗೊಮ್ಮಟಗಿರಿ ಕ್ಷೇತ್ರದಲ್ಲಿರುವ ಶ್ರೀ ಗೋಮಟೇಶ್ವರ ಸ್ವಾಮಿಯ 23 ನೇ ಮಸ್ತಕಾಭಿಷೇಕ ಮಹೋತ್ಸವವು ನಿನ್ನೆ ಬಹು ವಿಜೃಂಭಣೆಯಿಂದ ನಡೆಯಿತು. ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ರಾಜ್ಯದ ಮುಖ್ಯ ಮಂತ್ರಿಯವರ ಪತ್ನಿ ಶ್ರೀಮತಿ ಚಿಕ್ಕಮ್ಮಣ್ಣಿ ಡಿ. ದೇವರಾಜಅರಸ್ ಅವರು ದಯಮಾಡಿಸಿದ್ದರು. ಅಭಿಷೇಕಕ್ಕಾಗಿ ಇಟ್ಟಿದ್ದ ಐದು ಕಳಶಗಳಪೈಕೆ ಎರಡನೆಯ ಕಳಶವನ್ನು ಹರಾಜಿನಲ್ಲಿ 1001 ರೂ.ಗಳಿಗೆ ಪಡೆದು ಅಭಿಷೇಕ ನಡೆಸಿದರು.

★

ಚಂಡ ಮಾರುತ

ಹಿಕೆಯಾಡೋ ಪಶ್ಚಿಮ ತೀರದಲ್ಲಿ ಜಪಾನ್ ತೀರದಲ್ಲಿ ಆದ ಚಂಡ ಮಾರುತದಿಂದ 35 ಮಂದಿ ಸತ್ತು 213 ಮಂಗಾಯಗೊಂಡರೆಂದು ಟೋಕಿಯೋ ವಾರ್ತೆ

ಭವಿಷ್ಯನುಡಿಯುವವರು ಮತ್ತು ಜೋತಿಷಿಗಳ ಭವಿಷ್ಯ ನುಡಿ

ಭಾರತ, ಜಪಾನ್, ಹಾಂಕಾಂಗ್, ತೈವಾನ್ ಮತ್ತು ದಕ್ಷಿಣ ಕೊರಿಯದ 100 ನುಂದಿ ಭವಿಷ್ಯ ನುಡಿಯುವವರು ಮತ್ತು ಜೋತಿಷಿಗಳು. ದಕ್ಷಿಣ ಕೊರಿಯಾದ ಸಿಯೂಲ್ ನಗರದ ಹೊರವಲಯದಲ್ಲಿ ಈಚೆಗೆ ಸಮ್ಮೇಳನ ನಡೆಸಿ, ತಮ್ಮ ಭವಿಷ್ಯ ನುಡಿಗಳನ್ನು ಪ್ರಕಟಿಸಿದರು 5 ವರ್ಷಗಳಲ್ಲಿ ಮೂರು ಭಾರಿ ಭೂಕಂಪಗಳೂ, ನ್ಯಾವುಮೂ ಉಂಟಾಗುವುದೆಂದಿರುವರು – 2000 ದ ಇಸವಿಗೆ ಮುಂಚೆ ಜನತೆ ಯೋಚನೆ ಮತ್ತು ಭಾವನೆಗಳು ಬದಲುಗೊಳ್ಳುವವು ; ವಿಶ್ವದಲ್ಲಿ ಶಾಂತಿ, ಸೌಹಾರ್ದ ನೆಲಸುವುದು – ವಿಜ್ಞಾನಕ್ಕಿಂತ ಪಾರಮಾರ್ಥದ ಕೈ ಮೇಲಾಗುವುದು ಎಂದಿರುವರು.

ವಿದ್ಯಾರ್ಥಿಗಳಿಗೆ ಇನ್ಷೂರೆನ್ಸ್

ಬೊಂಬಾಯಿ – ಒಲ್ಲಿಯ ಡೋಂ ಬಾಸ್ಕೊ ಸ್ಕೂಲಿನಲ್ಲಿ, ವಿದ್ಯಾರ್ಥಿಗಳ ಸಾವು, ಅಂಗವಿಕಲತೆ, ದೌರ್ಬಲ್ಯಕ್ಕೆ ಫೈರ್ ಎಂಜಿನ್ ಜನರಲ್ ಇನ್ಷೂರೆನ್ಸ್ ಕಂಪೆನಿ ಪರ ಜಾರಿಗೆ ತಂದಿದೆ.

ಭಾರತದ ವಿದ್ಯಾರ್ಥಿ ಕ್ರಿಕೆಟ್ ತಂಡ

ಬೊಂಬಾಯಿ— ಭಾರತೀಯ ವಿದ್ಯಾರ್ಥಿ ಕ್ರಿಕೆಟ್ ತಂಡವು 1973 ರಲ್ಲಿ ಇಂಗ್ಲೆಂಡಿನಲ್ಲಿ ಪ್ರವಾಸ ಮಾಡುವ ಸಂಭವವಿದೆ.

ದಿನವಾಣಿ

ವ್ಯಸನವು ಒಂದು ಗಂಟೆಯನ್ನು ಹತ್ತರಷ್ಟು ಮಾಡುತ್ತದೆ. – ಷೇಕ್ಸ್‌ಪಿಯರ್

SHAKTI SUDHA

A Superb Tonic

ಅಖಿಲಭಾರತದಲ್ಲಿ ಕೂಡಲೇ



ಗೋವಧೆ ನಿಷೇಧವಾಗಲಿ

ವುಡ್‌ಲ್ಯಾಂಡ್ಸ್ 15-9-72ರಿಂದ ಅಮೋಘ 2ನೇ ವಾರ

ಫಿಲಂಯುಗ ಅರ್ಪಿಸುವ

ಆಂಖೊ ಆಂಖೊ ಮೆ

ಹಿಂದಿ ಈಸ್ಟ್‌ಮನ್ ಕಲರ್

ಪಾತ್ರ : ರಾಖಿ, ರಾಜೇಶ್ ರೋಷನ್ ಮತ್ತು ಪ್ರಾಣ್

ಅಪೆರಾ 15 9 72 ರಿಂದ

— ಅತ್ಯಮೋಘ ತಮಿಳು ಚಿತ್ರ —

ತಂಗಗೋಪುರಂ

ಪಾತ್ರ : ಜಯಶಂಕರ್ ಜಯಲಲಿತ ನಿರ್ಮಲ ವಿ ಕೆ ರಾಮಸ್ವಾಮಿ ಸೌಂದರರಾಜ್ ಮುಂತಾದವರು

ನಿರ್ದೇಶನ ಸೂಲಮಂಗಲೈ ಸಂಗೀತ ಎಸ್ ಎಂ ಎಸ್ ನಾಯ್ಡು

ಪ್ರತಿ ದಿನ 3 ಪ್ರದರ್ಶನಗಳು

'ಮಾನವನು ಕೇವಲ ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಆದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

★

ಆನೆ – ಹುಡುಗ

Potect the Cow

Help The Gorakshana

— Humanitarian Propoganda Monthly ....

Quality Printing Neat Binding

Lakshminarasimha Press

Sivarampet, Mysore

Edited Printedand Published by Dharmapracharanirata M S Krishna Rao (Propretor) at the Satvavadi Press Chamarajapuram Mysore